# ಹಬ್ಬದ ಸಂದರ್ಭಕ್ಕೆ ಫ್ಲಿಪ್ ಕಾರ್ಟ್ ಫರ್ನಿಚರ್ ಕೊಡುಗೆ ಬಲವರ್ಧನೆ

- *ದೇಶಾದ್ಯಂತ ಗ್ರಾಹಕರಿಗೆಂದು ಕೈಗೆಟುಕುವ ದರ ಮತ್ತು ಗುಣಮಟ್ಟದ ಪೀಠೋಪಕರಣ ಪೂರೈಕೆಗೆ ಆಯ್ಕೆಗಳ ವಿಸ್ತರಣೆ, ಮಾರಾಟಗಾರರು ಮತ್ತು ಸ್ಥಳಗಳ ವಿಸ್ತರಣೆ*
- *ಗುಣಮಟ್ಟದ ಪೀಠೋಪಕರಣಗಳ ಬಗ್ಗೆ ಗ್ರಾಹಕರಿಗೆ ಸಮಗ್ರ ಮಾಹಿತಿ ತಿಳಿಸಲು `ಇಂಡಿಯಾ ಕಾ ಫರ್ನಿಚರ್ ಸ್ಟುಡಿಯೋ' ಎಂಬ ಅಭಿಯಾನ ಆರಂಭಿಸಿದ ಫ್ಲಿಪ್ ಕಾರ್ಟ್*

ಬೆಂಗಳೂರು, ಸೆಪ್ಟೆಂಬರ್ xx, 2020: ಭಾರತದ ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಮುಂಬರುವ ತನ್ನ ಹಬ್ಬದ ಋತು ಮತ್ತು ಬಿಗ್ ಬಿಲಿಯನ್ ಡೇಸ್ ನ ಸಂದರ್ಭದಲ್ಲಿ ಗ್ರಾಹಕರ ವೈವಿಧ್ಯಮ ಆರಾಮದ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಪೀಠೋಪಕರಣ ವಿಭಾಗವನ್ನು ಬಲಪಡಿಸಲು ತೆಗೆದುಕೊಂಡಿರುವ ಉಪಕ್ರಮಗಳನ್ನು ಇಂದು ಪ್ರಕಟಿಸಿದೆ. ವಿಸ್ತಾರವಾದ ಶ್ರೇಣಿಯ ಪೀಠೋಪಕರಣಗಳ ಲಭ್ಯತೆ, ಕೈಗೆಟುಕುವ ದರ, ಪ್ರವೇಶಿಸುವಿಕೆ ಮತ್ತು ಗುಣಮಟ್ಟವನ್ನು ಹೆಚ್ಚಳ ಮಾಡಲು ಆದ್ಯತೆ ನೀಡುತ್ತಿದೆ. ಈ ಮೂಲಕ ದೇಶಾದ್ಯಂತ ಗ್ರಾಹಕರು ತಮ್ಮ ನೆಚ್ಚಿನ ಪೀಠೋಪಕರಣಗಳನ್ನು ಆನ್ ಲೈನ್ ಮೂಲಕ ಆಯ್ಕೆ ಮಾಡಿಕೊಳ್ಳುವ ವಿಧಾನವನ್ನು ಸುಲಭಗೊಳಿಸಿದೆ. ಪೀಠೋಪಕರಣಗಳ ಖರೀದಿಯಲ್ಲಿ ಗ್ರಾಹಕರ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಈ ಉಪಕ್ರಮಗಳನ್ನು ಕೈಗೊಂಡಿದೆ. ಈ ಗ್ರಾಹಕರ ವರ್ಗದಲ್ಲಿ ಮೊದಲ ಬಾರಿಗೆ ಇ-ಕಾಮರ್ಸ್ ಬಳಕೆದಾರರು ಸೇರಿದ್ದಾರೆ. ಇವರು ತಮ್ಮ ಮನೆಯೊಳಗಿನ ಅಗತ್ಯತೆಗಳ ಜತೆಗೆ ಇನ್ನಿತರೆ ಅಗತ್ಯಗಳನ್ನು ಪೂರೈಸಿಕೊಳ್ಳುವ ನಿಟ್ಟಿನಲ್ಲಿ ಡಿಜಿಟಲ್ ಕಾಮರ್ಸ್ ಗೆ ಒಲವು ತೋರಿದವರಾಗಿದ್ದಾರೆ.

ಕೋವಿಡ್-19 ಸಾಂಕ್ರಾಮಿಕವು ಫರ್ನಿಚರ್ ಸೇರಿದಂತೆ ವಿವಿಧ ಉತ್ಪನ್ನಗಳ ವಿಭಾಗಗಳಲ್ಲಿ ಹೊಸ ಬೇಡಿಕೆಗೆ ಮುನ್ನುಡಿ ಬರೆದಿದೆ. ಗ್ರಾಹಕರು ಮನೆಯಲ್ಲೇ ಕುಳಿತು ಆನ್ ಲೈನ್ ಮೂಲಕ ತಮಗಿಷ್ಟವಾದ ಮತ್ತು ಅಗತ್ಯವಿರುವ ಉತ್ಪನ್ನಗಳನ್ನು ಖರೀದಿಸುವ ವಿಧಾನವನ್ನು ಹೆಚ್ಚು ಮಾಡಿದೆ. ದಕ್ಷತಾಶಾಸ್ತ್ರದ ಪೀಠೋಪಕರಣಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದು ಗಮನಾರ್ಹವಾಗಿದೆ. ಸಾಂಕ್ರಾಮಿಕ ಬರುವ ಮುನ್ನ ಮೆಟ್ರೋ ನಗರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಕಂಡುಬರುತ್ತಿತ್ತು. ಲಾಕ್ ಡೌನ್ ನಂತರ 2 ಮತ್ತು 3 ನೇ ದರ್ಜೆಯ ನಗರಗಳಲ್ಲಿಯೂ ಪೀಠೋಪಕರಣಗಳನ್ನು ಖದೀಸುವ ಗ್ರಾಹಕರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಈಗ ಹಬ್ಬದ ಋತು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ತನ್ನ ಗ್ರಾಹಕರಿಗೆ ಮೌಲ್ಯಾಧಾರಿತ ಪೀಠೋಪಕರಣಗಳ ಶಾಪಿಂಗ್ ಗೆ ಒನ್ ಸ್ಟಾಪ್ ತಾಣವನ್ನು ನೀಡುವ ಉದ್ದೇಶವನ್ನು ಹೊಂದಿದೆ.

ಈ ದಿಸೆಯಲ್ಲಿ ಫ್ಲಿಪ್ ಕಾರ್ಟ್ ಕಳೆದ ಒಂದು ವರ್ಷದಿಂದ ತನ್ನ ಮಾರಾಟಗಾರರ ಸಂಖ್ಯೆಯನ್ನು ದ್ವಿಗುಣಗೊಳಿಸಿದೆ. ದೇಶಾದ್ಯಂತ ಪ್ರಸ್ತುತ 10,000 ಕ್ಕೂ ಅಧಿಕ ಮಾರಾಟಗಾರರನ್ನು ಹೊಂದಿದೆ ಮತ್ತು 3.5 ಲಕ್ಷಕ್ಕೂ ಅಧಿಕ ಆಯ್ಕೆಗಳನ್ನು ಹೊಂದುವ ಮೂಲಕ ಗ್ರಾಹಕರ ವಿಕಸನಗೊಂಡಿರುವ ಬೇಡಿಕೆಯನ್ನು ಪೂರೈಸಲಿದೆ. ಇದಲ್ಲದೇ, ಡಬ್ಲೂಎಚ್ ಫರ್ನಿಚರ್ ಮಾರಾಟಗಾರರ ಸಂಖ್ಯೆಯನ್ನೂ ಹೆಚ್ಚಳ ಮಾಡಿಕೊಂಡಿದೆ. ಈ ನಿಟ್ಟಿನಲ್ಲಿ ವಿಪ್ರೋ ಮತ್ತು ಫೆದರ್ ಲೈಟ್ ಉತ್ಪನ್ನಗಳ ಮಾರಾಟದಲ್ಲಿ ಶೇ.30 ರಷ್ಟು ಹೆಚ್ಚಳ ಕಂಡುಬಂದಿದೆ. ಹೊಸದಾದ ಮತ್ತು ಅನುಕೂಲಕರವಾದ ಪಾವತಿ ವಿಧಾನಗಳಾದ ಫ್ಲಿಪ್ ಕಾರ್ಟ್ ಪೇ ಲೇಟರ್ ನ ಮೂಲಕ ಫ್ಲಿಪ್ ಕಾರ್ಟ್ ಗ್ರಾಹಕರಿಗೆ ಗುಣಮಟ್ಟದ ಪೀಠೋಪಕರಣಗಳನ್ನು ಇನ್ನೂ ಹೆಚ್ಚು ಕೈಗೆಟುಕುವ ದರ ಮತ್ತು ಖರೀದಿ ಪ್ರಕ್ರಿಯೆಯನ್ನು ಮತ್ತಷ್ಟು ಸರಳಗೊಳಿಸುವ ಉದ್ದೇಶವನ್ನು ಹೊಂದಿದೆ. ಇದಲ್ಲದೇ, ದೇಶಾದ್ಯಂತ ಸೇವಾ ಸಾಧ್ಯತೆಗಳಿರುವ ಎಲ್ಲಾ ಪ್ರದೇಶಗಳಿಗೂ ಉತ್ಪನ್ನಗಳನ್ನು ತಲುಪಿಸುವ ನಿಟ್ಟಿನಲ್ಲಿ ಸದೃಢವಾದ ಪೂರೈಕೆ ಜಾಲವನ್ನು ಹೊಂದಿದೆ. ಇದರ ಮೂಲಕ ಕೈಗೆಟುಕುವ ಮತ್ತು ಗುಣಮಟ್ಟದ ಪೀಠೋಪಕರಣಗಳನ್ನು ಬಯಸುವ ಗ್ರಾಹಕರಿಗೆ ನೆರವಾಗಲಿದೆ.

ಇದಲ್ಲದೇ ಫ್ಲಿಪ್ ಕಾರ್ಟ್ ``ಇಂಡಿಯಾ ಕಾ ಫರ್ನಿಚರ್ ಸ್ಟುಡಿಯೋ" ಅಭಿಯಾನವನ್ನೂ ಆರಂಭಿಸಿದೆ. ಇದರ ಉದ್ದೇಶ ದೇಶಾದ್ಯಂತ ಇರುವ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಪೀಠೋಪಕರಣಗಳ ವಿಸ್ತಾರವಾದ ಆಯ್ಕೆಗಳನ್ನು ಹೊಂದುವುದರ ಬಗ್ಗೆ ನೆರವಾಗುವುದಾಗಿದೆ. ಈ ಅಭಿಯಾನದಡಿ ಆಯ್ಕೆ ಮಾಡಿಕೊಳ್ಳಲು ಗ್ರಾಹಕರಿಗೆ ಸ್ವಾತಂತ್ರ್ಯ ನೀಡುವುದು, ಗ್ರಾಹಕರ ವಿಕಸನದ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಮೌಲ್ಯವರ್ಧನೆಯನ್ನು ನೀಡುವ ಮೂಲಕ ಅವರಿಗೆ ಟ್ರೆಂಡಿ ವಿನ್ಯಾಸಗಳ ಪೀಠೋಪಕರಣಗಳನ್ನು ಒದಗಿಸಲಾಗುತ್ತದೆ.

ಫ್ಲಿಪ್ ಕಾರ್ಟ್ ಫರ್ನಿಚರ್ ಮತ್ತು ಗ್ರಾಸರಿ ಬಿಜಿಎಂಎಚ್ ನ ಹಿರಿಯ ಉಪಾಧ್ಯಕ್ಷ ಮನೀಶ್ ಕುಮಾರ್ ಅವರು ಮಾತನಾಡಿ, ``ದೇಶೀಯವಾಗಿ ಬೆಳೆದಿರುವ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಗ್ರಾಹಕರಲ್ಲಿ ಬೆಳೆಯುತ್ತಿರುವ ಬೇಡಿಕೆಗಳಿಗೆ ಅನುಗುಣವಾಗಿ ಕೈಗೆಟುಕುವ ದರದಲ್ಲಿ ವಿಸ್ತಾರವಾದ ಶ್ರೇಣಿಯ ಗುಣಮಟ್ಟದ ಉತ್ಪನ್ನಗಳನ್ನು ನೀಡುತ್ತಿದೆ. ಈ ಮೂಲಕ ಗ್ರಾಹಕರಿಗೆ ತಮ್ಮ ಅಗತ್ಯ ಪೀಠೋಪಕರಣಗಳ ಅಗತ್ಯತೆಗಳನ್ನು ಪೂರೈಸುವ ನೆಚ್ಚಿನ ವೇದಿಕೆಯಾಗಿದೆ. ನಮ್ಮ ವಿಸ್ತರಿತ ಸಾವಿರಾರು ಮಾರಾಟಗಾರರು ಲಕ್ಷಾಂತರ ಉತ್ಪನ್ನಗಳು ಮತ್ತು ದೇಶವಿಡೀ ತಲುಪಿಸುವ ವ್ಯವಸ್ಥೆಯಿಂದಾಗಿ ಮುಂಬರುವ ವರ್ಷಗಳಲ್ಲಿ ಇ-ಕಾಮರ್ಸ್ ಬೆಳವಣಿಗೆಯಲ್ಲಿ ಫರ್ನಿಚರ್ ವಿಭಾಗ ಪ್ರಮುಖ ಪಾತ್ರ ವಹಿಸಲಿದೆ. ನಮ್ಮ ಗ್ರಾಹಕರಿಗೆ ಉತ್ತಮ ರೀತಿಯಲ್ಲಿ ನೆರವಾಗುವ ನಿಟ್ಟಿನಲ್ಲಿ ನಾವು

`ಇಂಡಿಯಾ ಕಾ ಫರ್ನಿಚರ್ ಸ್ಟುಡಿಯೋ' ಅಭಿಯಾನವನ್ನು ಆರಂಭಿಸಿದ್ದೇವೆ. ಇದರಲ್ಲಿ ನಮ್ಮ ಲಕ್ಷಾಂತರ ಹೊಸ ಮತ್ತು ಹಾಲಿ ಗ್ರಾಹಕರಿಗೆ ಹೆಸರಾಂತ ಕಂಪನಿಗಳ ಗುಣಮಟ್ಟದ ಮತ್ತು ಮೌಲ್ಯಾಧಾರಿತ ಉತ್ಪನ್ನಗಳನ್ನು ಅನಾವರಣ ಮಾಡುತ್ತಿದ್ದೇವೆ. ಕೋವಿಡ್ ಸಂದರ್ಭದಲ್ಲಿ ಆನ್ ಲೈನ್ ಫರ್ನಿಚರ್ ರೀಟೇಲಿಂಗ್ ಯಶಸ್ವಿಯಾಗಿ ಸಾಗಿದೆ. ಅಲ್ಲದೇ ಭಾರತದಲ್ಲಿ ಆನ್ ಲೈನ್ ಕಾಮರ್ಸ್ ಮುನ್ನುಗ್ಗಿ ಸಾಗುತ್ತಿದೆ ಮತ್ತು ಇ-ಕಾಮರ್ಸ್ ನ ಮೌಲ್ಯದಲ್ಲಿ ಗ್ರಾಹಕರ ವಿಶ್ವಾಸ ವೃದ್ಧಿಯಾಗುತ್ತಿದೆ. ಬದಲಾವಣೆ ಹೊಂದದಿರುವ ಬೇಡಿಕೆ ಪರಿಸ್ಥಿತಿಗೆ ಅನುಗುಣವಾಗಿ ಫ್ಲಿಪ್ ಕಾರ್ಟ್ ತನ್ನ ಉತ್ಪನ್ನಗಳ ಕೊಡುಗೆಯ ಆವಿಷ್ಕಾರಕ ಮತ್ತು ಸೇರ್ಪಡೆಯನ್ನು ಮುಂದುವರಿಸಲಿದೆ. ದೇಶದಲ್ಲಿರುವ ತನ್ನ ಸಾವಿರಾರು ಮಾರಾಟಗಾರರು ಮತ್ತು ಬ್ರ್ಯಾಂಡ್ ಗಳ ಸ್ಥಿರವಾದ ಬೆಂಬಲದಿಂದಾಗಿ ಫ್ಲಿಪ್ ಕಾರ್ಟ್ ತನ್ನ ಗ್ರಾಹಕರಿಗೆ ವಿವಿಧ ಬಗೆಯ ವಿಸ್ತಾರವಾದ ಗುಣಮಟ್ಟದ ಉತ್ಪನ್ನಗಳನ್ನು ಕೈಗೆಟುಕುವ ದರದಲ್ಲಿ ನೀಡಲು ಸಾಧ್ಯವಾಗುತ್ತಿದೆ. ಕಳೆದ ವರ್ಷದಲ್ಲಿ ಫ್ಲಿಪ್ ಕಾರ್ಟ್ ದೇಶದ ಮೂಲೆ ಮೂಲೆಗೂ ಆನ್ ಲೈನ್ ಫರ್ನಿಚರ್ ರೀಟೇಲಿಂಗ್ ಅನ್ನು ತಲುಪಿಸುವ ನಿಟ್ಟಿನಲ್ಲಿ ಫ್ಲಿಪ್ ಕಾರ್ಟ್ ತನ್ನ ವಿತರಣೆ ಮತ್ತು ಸೇವೆಗಳ ಸ್ಥಾಪನೆಯನ್ನು ಆರಂಭಿಸಿತ್ತು" ಎಂದರು.

**Link to the video:**
https://www.youtube.com/watch?v=AR43xQH191s

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution. With a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

**For more details contact:** media@flipkart.com